ಶ್ರೀ ಚಾಮುಂಡೇಶ್ವರಿ ಶುಗರ್ಸ್

೪೧. ಶ್ರೀ ಜಿ. ಮಾದೇಗೌಡ.—ಮಾನ್ಯ ಭಾರಿ ಮಂತ್ರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶ್ರೀ ಚಾಮುಂಡೇಶ್ವರಿ ಶುಗರ್ ಫ್ಯಾಕ್ಟರಿ. ಕೆ. ಎಮ್. ದೊಡ್ಡಿ, ಮಂಡ್ಯ ಜಿಲ್ಲೆಯವರು ಪ್ರತಿ ಟನ್‌ಗೆ ೨೫ರೂ ದರದಿಂದ ಹೇರು ಬಂಡವಾಳಕ್ಕಾಗಿ ಪಜಾ ಮಾಡಿ ಕೊಡುತ್ತಾ ಇರುವುದು ಮತ್ತು ಕೈಗಾರಿಕೆಗೆ ರಸೀತಿಗಳನ್ನು ಕೊಟ್ಟಿರುವುದು ನಿಜವೆ?

ಆ) ಒಟ್ಟು ರೈತರ ಸಂಖ್ಯೆ ಮಂತ್ರು ಕಬ್ಬು ಬೆಳೆಗಾರರಿಗೆ ಕೊಡಬೇಕಾಗಿರುವ ಒಪ್ಪಿಗೆದಾರರಾಗಲೀ ಅಥವಾ ನಾನ್ ಒಪ್ಪಿಗೆದಾರರಾಗಲೀ ಇವತ್ತಿನವರೆವಿಗೂ ವಜಾ ಮಾಡಿರುವ ಹಣವೆಷ್ಟು?

ಇ) ಒಟ್ಟು ಶೇರು ಸರ್ಟಿಫಿಕೇಟ್ಸ್‌ಗಳನ್ನು ಕೊಟ್ಟಿರುವಂತಹ ಜನರು ಎಷ್ಟು? ಮತ್ತು ಕೊಟ್ಟಿರುವಂತಹ ಒಟ್ಟು ಶೇರುಗಳ ಬೆಲೆ ಎಷ್ಟು?

ಈ) ಇನ್ನೂ ಶೇರು ಸರ್ಟಿಫಿಕೇಟ್ಸ್‌ಗಳನ್ನು ಪಡೆಯಬೇಕಾಗಿರುವ ಜನರ ಸಂಖ್ಯೆ ಮತ್ತು ಕೊಡ ಬೇಕಾಗಿರುವ ಶೇರ್ಸ್‌ಗಳ ಬೆಲೆ ಎಷ್ಟು?

ಶ್ರೀ ಜೆ.ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು).—

ಅ) ಹೌದು.

ಆ) ೬೧೯೦ ರೂ. ೬೧.೬೬ಲಕ್ಷ.

ಇ) ೫೭೬೬ ಕೊಟ್ಟಿರುವ ಶೇರುಗಳ ಬೆಲೆ ರೂ. ೫೭.೪೧ ಲಕ್ಷ.

ಈ) ೩೯೪ ಇನ್ನೂ ಕೊಡಬೇಕಾದ ಶೇರುಗಳ ಬೆಲೆ ರೂ. ೪.೨೫ ಲಕ್ಷ.

ಚನ್ನಪಟ್ಟಣದಲ್ಲಿ ಹಂಡ್ಕೋ ಯೋಜನೆಯಡಿಯಲ್ಲಿ ಕಟ್ಟಿರುವ ಮನೆಗಳ ಬಗ್ಗೆ

೧೮೪೩. ಶ್ರೀ ಎಂ. ವರದೇಗೌಡ (ಚನ್ನಪಟ್ಟಣ).—ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚನ್ನಪಟ್ಟಣದಲ್ಲಿ ಹಂಡ್ಕೋ ಯೋಜನೆಯಿಂದ ಎಷ್ಟು ವಸತಿ ಗೃಹಗಳನ್ನು ಸಾರ್ವಜನಿಕರಿಗೆ ನೀಡಲಾಗಿದೆ?

ಆ) ಈ ವರ್ಷ ಎಷ್ಟು ವಸತಿ ಗೃಹಗಳನ್ನು ನಿರ್ಮಿಸಲು ಯೋಜಿಸಲಾಗಿದೆ?

ಇ) ಹಾಗಿದ್ದಲ್ಲಿ ಸದರಿ ಗೃಹಗಳನ್ನು ನಿರ್ಮಿಸಲು ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಹಾಗೂ ವಸತಿ ರಾಜ್ಯ ಸಚಿವರು).—

ಅ) ಇಲ್ಲಾ.

ಆ) ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳಲಾಗಂತ್ತಿದೆ.

ಇ) ಭೂಮಿಯನ್ನು ಸ್ವಾಧೀನಪಡಿಸಿಕೊಂಡ ಮೇಲೆ ಸದರಿ ಗೃಹಗಳನ್ನು ನಿರ್ಮಿಸಲು ಯೋಜನೆ ತೆಗೆದುಕೊಳ್ಳಲಾಗುತ್ತದೆ.

ದಾವಣಗೆರೆಯಲ್ಲಿರುವ ಕೊಳಚೆ ಪ್ರದೇಶಗಳ ಬಗ್ಗೆ

೧೨೭೫. ಶ್ರೀ ಪಂಪಾಪತಿ.— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಾವಣಗರೆ ನಗರದಲ್ಲಿ ಕೊಳಚೆ ಪ್ರದೇಶಗಳೆಷ್ಟು? ಈ ಪ್ರದೇಶದಲ್ಲಿ ವಾಸಿಸುವ ಒಟ್ಟು ಜನಸಂಖ್ಯೆ ಎಷ್ಟು?